ಒ ಎಸ್ ನಂ. 290/2012
ಪಿ.ಡಬ್ಲ್ಯೂಃ 1 ಹಾಜರು

ದಿನಾಂಕಃ 16-10-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎನ್ ಎಸ್ ಜಿ ವಕೀಲರಿಂದಃ

(ಪ್ರತಿವಾದಿ ನಂ.1 ಹಾಗೂ 11 ರಿಂದ 14 ರವರ ಪರ)

ಮೊದಲನೆ ಪ್ರತಿವಾದಿ ನನ್ನ ತಂದೆ ಶ್ರಮ ಜೀವಿ ಎಂದರೆ ಸರಿ. ನನ್ನ ತಂದೆ ಈ ಮೊದಲು ತನ್ನ ಸಣ್ಣ ವಯಸ್ಸಿನಲ್ಲಿ ಗೋಕಾಕ ಸಂತೆಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಆತನಿಗೆ ಬಟ್ಟೆ ವ್ಯಾಪಾರದಿಂದ ಬರುವ ಆಧಾಯವನ್ನು ಹೊರತು ಪಡಿಸಿ ಬೇರೆ ಆಧಾಯ ಇರಲಿಲ್ಲ ಎಂದರೆ ಸರಿ. ಮೊದಲನೆ ಪ್ರತಿವಾದಿ ಹಿರಿಯರಿಂದ ಯಾವುದೇ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿ ಬಟ್ಟೆ ವ್ಯಾಪಾರದಿಂದ ಐಟಮ ನಂ. 6 ಮತ್ತು 7 ನೇ ಆಸ್ತಿಗಳನ್ನು ಖರೀಸಿದ್ದ ಎಂದರೆ ಸಾಕ್ಷಿ ಆತನೊಂದಿಗೆ 8 ಮಕ್ಕಳು ಸಹ ಖರೀದಿಸಿದ್ದರು ಎಂದು ನುಡಿದಿರುತ್ತಾರೆ. ಆ ಬಗ್ಗೆ ನನ್ನ ತಂದೆಯ ಬಳಿ ಇರುವ ಕ್ರಯ ಪತ್ರ ಇದೆ . ಸದರಿ ಆಸ್ತಿಗಳು ಮೊದಲನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿ ಸಿಂಡಿಕೇಟ ಬ್ಯಾಂಕ ಗೋಕಾಕದಿಂದ ಸಾಲ ಪಡೆದುಕೊಂಡು 11 ನೇ ಪ್ರತಿವಾದಿಯೊಂದಿಗೆ ಲಾಡ್ಜ ವ್ಯಾಪಾರ ನಡೆಸುತ್ತಿದ್ದ ಎಂದರೆ ಸಾಕ್ಷಿ 8 ಜನ ಮಕ್ಕಳು ನಡೆಸುತ್ತಿದ್ದರುಎಂದು ನುಡಿಯುತ್ತಾರೆ. 1 ಮತ್ತು 11 ನೇ ಪ್ರತಿವಾದಿಯ ಪಾಲುದಾರಿಕೆಯಲ್ಲಿ ನಾವು ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಪಾಲುದಾರಿಕೆಯಲ್ಲಿ ನಾವು 8 ಜನ ಪಾಲುದಾರರು ಇದ್ದೇವೆ ಎಂದು ತೋರಿಸಲು ಪಾಲುದಾರಿಕೆ ಪತ್ರ ಹಾಕಿಲ್ಲ ಆದರೆ ನಾನು ಅದನ್ನು ಹಾಜರು ಮಾಡಬಹುದು.

ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ.

ಸಾಕ್ಷಿಯ ಸಹಿ